# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.655-2014** **ಡಿ. ಡಬ್ಲ್ಯೂ: 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಪ್ರಕಾಶ್<br>ಹೊರಳವಾಡಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ** 22-11-2024. |

**<u>ಪಾಟೀ ಸವಾಲು: ವಾದಿಗಳ ಪರ  ಶ್ರೀ ಎಂ.ಎಸ್   ವಕೀಲರಿಂದ:</u>**

ನಾನು 8 ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರು ವಿಚಾರಗಳು ಗೊತ್ತು. ವಾದಿಯವರು ಗಲ್ಲಿಯನ್ನು ತಮ್ಮ ಸ್ವತ್ತು ಎಂದು ಹೇಳಿಕೊಂಡು ಈ ದಾವಾವನ್ನು ಸಲ್ಲಿಸಿರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು ವಾದಿ ಮತ್ತು ನನ್ನ ವಾಸದ ಮನೆಗಳು ನಡುವೆ ಇರುತ್ತದೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತು 9 ಅಡಿ ಅಗಲ ಮತ್ತು 45 ಅಡಿ ಉದ್ದ ಇರುತ್ತದೆ  ಎಂದರೆ ಸರಿಯಲ್ಲ.   ದಾವಾ ಷೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ ನಮಗೆ ಸೇರಿದ ಮನೆ ಇರುತ್ತದೆ ಎಂದರೆ ಸರಿ. ನಮ್ಮ ಮನೆಯು ಉತ್ತರ-ದಕ್ಷಿಣವಾಗಿ 30 ಅಡಿ ಉದ್ದ ಇದ್ದು, ದಾವಾ ಷೆಡ್ಯೂಲ್ ಸ್ವತ್ತು ಸಹ ನಮ್ಮ ಮನೆಯ ಅಳತೆಯಷ್ಟೆ ಇರುತ್ತದೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ ನಮಗೆ ಸೇರಿದ ವಾಸದ ಮನೆ ಇರುತ್ತದೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತಿನ ಪಶ್ಚಿಮಕ್ಕೆ ವಾದಿಯವರ ಮನೆ

ಇರುತ್ತದೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತಿನ ಉತ್ತರಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತಿನ ದಕ್ಷಿಣಕ್ಕೆ ರೇವಣ್ಣನವರ ಸ್ವತ್ತು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಹದೇವೇಗೌಡ ರವರ ಸ್ವತ್ತು ಇರುತ್ತದೆ ಎಂದು ನುಡಿಯುತ್ತಾರೆ.

2. ದಾವಾ ಷೆಡ್ಯೂಲ್ ಸ್ವತ್ತಿನ ಜಂಜರ್ ನಂಬರ್ ಮತ್ತು ಸ್ವತ್ತಿನ ನಂಬರ್ 6 ಎಂದರೆ ಸರಿ. ಸದರಿ ಸ್ವತ್ತು ಹೊರಳವಾಡಿ ಗ್ರಾಮ ಪಂಚಾಯ್ತಿಗೆ ಸೇರಿದ ಸ್ವತ್ತು ಎಂದರೆ ಸರಿ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿ ಸದರಿ ಫೋಟೋದಲ್ಲಿ ಕಾಣುತ್ತಿರುವ ಮನೆಗಳು ವಾದಿ ಮತ್ತು ನಿಮಗೆ ಸೇರಿದ ಮನೆಗಳು ಆಗಿದ್ದು, ಅದರ ಮಧ್ಯದಲ್ಲಿ ಇರುವ ಸ್ವತ್ತು ದಾವಾ ಷೆಡ್ಯೂಲ್ ಸ್ವತ್ತು ಆಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದು ಸದರಿ ಫೋಟೋವನ್ನು ನಿಪಿ–6 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೆರಡು ಫೋಟೋಗಳನ್ನು ತೋರಿಸಿ ಸದರಿ ಫೋಟೋಗಳಲ್ಲಿ ಕಾಣುತ್ತಿರುವ ಖಾಲಿ ಜಾಗವೇ ದಾವಾ ಷೆಡ್ಯೂಲ್ ಸ್ವತ್ತು ಆಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದು ಸದರಿ ಫೋಟೋಗಳನ್ನು ನಿಪಿ–7 ಮತ್ತು 8 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ–6 ಅನ್ನು ತೋರಿಸಿ, ವಾದಿಯ ಮನೆಯ ಲಗತ್ತಾಗಿ ಸೌದೆಗಳನ್ನು ಹಾಕಿಕೊಳ್ಳಲಾಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಮೊದಲಿಗೆ ಹೌದು ಎಂದಿದ್ದು, ಆನಂತರ ನಾವು ಹಾಕಿಕೊಂಡಿರುತ್ತೇವೆ ಮತ್ತು ಅವರು

ಹಾಕಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-6 ರಲ್ಲಿ ವಾದಿಯ ಮನೆಗೆ ಲಗತ್ತಾಗಿರುವಂತೆ ಹಾಕಿರುವ ಸೌದೆಯೂ ವಾದಿಯವರದ್ದಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಸದರಿ ಸೌಧೆಯನ್ನು ನಾವು ಉಪಯೋಗಿಸಿಕೊಳ್ಳುತ್ತೇವೆ, ಅವರು ಉಪಯೋಗಿಸಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ನಿಪಿ-7 ರಲ್ಲಿ ವಾದಿಯ ಮನೆಗೆ ಲಗತ್ತಾದಂತೆ ಹೂವಿನ ಗಿಡಗಳು ಇರುತ್ತವೆ ಎಂದರೆ ಸರಿ. ನಿಪಿ-7 ರಲ್ಲಿ ವಾದಿಯ ಮನಗೆ ಹಬ್ಬಿಕೊಂಡಂತೆ ವಿಳ್ಯದೆಲೆ ಅಂಬು ಬೆಳೆದಿರುತ್ತದೆ ಎಂದರೆ ಸರಿ. ಸಾಕ್ಷಿಗೆ ನಿಪಿ-7 ಅನ್ನು ತೋರಿಸಿ ನಿಮ್ಮ ಮನೆಗೆ ಲಗತ್ತಾದಂತೆ ಯಾವುದೇ ಗಿಡಗಳು ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-7 ರಲ್ಲಿ ಕಾಣುತ್ತಿರುವ ಹೂವಿನ ಗಿಡಗಳನ್ನು ವಾದಿಯವರು ನೆಟ್ಟಿದ್ದು, ಅದಕ್ಕೆ ಅವರೇ ನೀರು ಮತ್ತು ಗೊಬ್ಬರವನ್ನು ಹಾಕುತ್ತಾರೆ ಎಂದರೆ ಸರಿಯಲ್ಲ. ವಾದಿಯವರೇ ನಿಪಿ-7 ರಲ್ಲಿ ಕಾಣುತ್ತಿರುವ ಗಿಡಗಳನ್ನು ವಾದಿಯವರೇ ಹಾಕಿರುವುದರಿಂದ ವಿಳ್ಯದೆಲೆಗೆ ಅಂಬನ್ನು ಅವರ ಮನೆಯ ಮೇಲಕ್ಕೆ ಬರುವಂತೆ ಮಾಡಿರತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಸಹ ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ವಾದಿಯವರ ಮನೆಯ ಪಕ್ಕದಲ್ಲಿ ಇರುವ ಗಿಡಗಳನ್ನು ವಾದಿಯವರೇ ಹಾಕಿದ್ದರೂ ಸಹ ನಾನು ಹಾಕಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಷೆಡ್ಯೂಲ್ ಸ್ವತ್ತಿನ ಪಶ್ಚಿಮದ ಕಡೆಗೆ ನಮ್ಮ ಮನೆಗೆ ಯಾವುದೇ ಬಾಗಿಲು ಇರುವುದಿಲ್ಲ ಎಂದರೆ ಸರಿ. ವಾದಿಯವರಿಗೆ 3 ಜನ ಗಂಡು ಮಕ್ಕಳು ಮತ್ತು 2 ಹೆಣ್ಣು ಮಕ್ಕಳು ಇರುತ್ತಾರೆ. ವಾದಿಯವರ 3 ಜನ ಗಂಡು ಮಕ್ಕಳು ದಾವಾ ಷೆಡ್ಯೂಲ್ ಸ್ವತ್ತಿನ ಪಶ್ಚಿಮಕ್ಕೆ ಇರುವ ಮನೆಯಲ್ಲಿಯೇ ವಾಸವಾಗಿರುತ್ತಾರೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತಿನ ಪಶ್ಚಿಮಕ್ಕೆ ಇರುವ ವಾದಿಯವರಿಗೆ ಸೇರಿದ ಮನೆಯ ಉತ್ತರದ ಕಡೆಗೆ ರಸ್ತೆ ಇದ್ದು, ಆ ಕಡೆಗೆ ವಾದಿ-1(ಇ) ಸಿದ್ಧಪ್ಪನವರ ಭಾಗಕ್ಕೆ ಸೇರಿದ ಮನೆ ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ನಿಪಿ-8 ಅನ್ನು ತೋರಿಸಿ ನಿಪಿ-8 ರಲ್ಲಿ 2 ಬಾಗಿಲುಗಳು ಕಾಣುತ್ತಿರುತ್ತವೆ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದು, ನಿಪಿ-8 ರಲ್ಲಿ ಕಾಣುತ್ತಿರುವ ಮಹಿಳೆಯರು ಶುಂಭು ಮತ್ತು ಮಹದೇವು ರವರ ಪತ್ನಿಯರು ಆಗಿರುತ್ತಾರೆ ಎಂದರೆ ಸರಿ. ನಿಪಿ-8 ರಲ್ಲಿ ಕಾಣುತ್ತಿರುವ 2 ಬಾಗಿಲುಗಳು ದಾವಾ ಷೆಡ್ಯೂಲ್ ಸ್ವತ್ತಿನ ಕಡೆಗೆ ತೆಗೆದಿರುವ ಬಾಗಿಲುಗಳು ಆಗಿರುತ್ತವೆ ಎಂದರೆ ಸರಿ. ಸಾಕ್ಷಿಗೆ ನಿಪಿ-8 ಅನ್ನು ತೋರಿಸಿ ನಿಪಿ-8 ರಲ್ಲಿ ಕಾಫಿ ಬಣ್ಣದ ಸೀರೆಯನ್ನು ಹುಟ್ಟಿರುವ ಮಹಿಳೆ ವಾದಿ-1(ಎ) ಶುಂಭು ರವರ ಪತ್ನಿಯಾಗಿರುತ್ತಾರೆ. ನಿಪಿ-8 ರಲ್ಲಿ ಕಾಣುತ್ತಿರುವ ನಲ್ಲಿ ಮತ್ತು ಅದಕ್ಕೆ ಲಗತ್ತಾಗಿ ಮಾಡಿಕೊಂಡಿರುವ ತೊಟ್ಟಿಯೂ ವಾದಿ-1(ಎ) ಶುಂಭು ರವರಿಗೆ ಸೇರಿದ್ದಾಗಿದ್ದು, ಅದನ್ನು ಅವರು ಉಪಯೋಗಿಸುತ್ತಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು

ಮಹದೇವಪ್ಪ ರವರ ಸ್ವತ್ತಿನಲ್ಲಿ ನಲ್ಲಿಯನ್ನು ಹಾಕಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ–8 ರಲ್ಲಿ ಕಾಣುತ್ತಿರುವ ನಲ್ಲಿ ಮತ್ತು ತೊಟ್ಟಿ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ನಿಪಿ–8 ರಲ್ಲಿ ಕಾಣುತ್ತಿರುವ ನಲ್ಲಿಯೂ ಶುಂಭು ರವರ ಮನೆಯ ಬಾಗಿಲಿನ ಎಡಭಾಗಕ್ಕೆ ಬರುತ್ತದೆ ಎಂದರೆ ಸರಿ. ಶಂಭು ರವರ ಮನೆಯ ಉತ್ತಕ್ಕೆ ಮಹದೇವು ರವರಿಗೆ ಸೇರಿದ ಮನೆ ಇರುತ್ತದೆ ಎಂದರೆ ಸರಿ. ನಿಪಿ–8 ರಲ್ಲಿ ಶಂಭು ರವರ ಪತ್ನಿಯೂ ಮಹದೇವು ರವರ ಮನೆಯ ಕಡೆಗೆ ನಿಂತಿರುತ್ತಾರೆ ಎಂದರೆ ಸರಿ. ನಿಪಿ–8 ರಲ್ಲಿ ಶುಂಭು ರವರ ಪತ್ನಿಯೂ ನಿಂತಿರುವ ದಕ್ಷಿಣಕ್ಕೆ ಶಂಭು ಮನೆ ಮತ್ತು ಬಾಗಿಲು ಇರುತ್ತದೆ ಎಂದರೆ ಸರಿ. ನಿಪಿ–8 ರಲ್ಲಿ ಕಾಣುತ್ತಿರುವ ನಲ್ಲಿ ಮತ್ತು ತೊಟ್ಟಿಯೂ ಶಂಭು ರವರ ಮನೆಯ ಉತ್ತರ ದಿಕ್ಕಿಗೆ ಇದ್ದು ಅದು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತು ವಾದಿಯವರಿಗೆ ಸೇರಿದ ಸ್ವತ್ತಾಗಿದ್ದು, ಸದರಿ ಸ್ವತ್ತನ್ನು ವಾಯವರು ಮಹದೇವು ಮತ್ತು ಶಂಭು ರವರ ಮನೆಗೆ ಹೋಗುವ ಉದ್ದೇಶದಿಂದ ಬಿಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ–6 ರಲ್ಲಿ ಕಾಣುತ್ತಿರುವ ಸೌದೆ ಮತ್ತು ನಿಪಿ–7 ಮತ್ತು 8 ರಲ್ಲಿ ಕಾಣುತ್ತಿರುವ ಗಿಡಗಳು ವಾದಿಯವರಿಗೆ ಸೇರಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಮನೆಯ ಪಶ್ಚಿಮಕ್ಕೆ ಇರುವ ದಾವಾ ಷೆಡ್ಯೂಲ್ ಸ್ವತ್ತಿನ ಕಡೆಗೆ ನಮಗೆ ಸೇರಿದ ಯಾವುದೇ ಬಾಗಿಲು ಇಲ್ಲದೇ

ಇರುವುದಿಲ್ಲವಾದ್ದರಿಂದ ನಾವು ದಾವಾ ಷೆಡ್ಯೂಲ್ ಸ್ವತ್ತನ್ನು ಓಡಾಡಲು ಉಪಯೋಗಿಸುವುದಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿಗೂ ನಮಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸೌದೆಗಳನ್ನು ಮತ್ತು ಗಿಡಗಳನ್ನು ನಾನು ಹಾಕಿದ್ದೇನೆ, ವಾದಿಯರು ಹಾಕಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ನನಗೂ ಹಕ್ಕು ಇದ್ದ ಪಕ್ಷದಲ್ಲಿ ನಮ್ಮ ಮನೆಯ ಗೋಡೆಗೆ ಲಗತ್ತಾಗದಂತೆ ನಾನು ಸಹ ಗಿಡಗಳನ್ನು ಹಾಕುತ್ತಿದ್ದು, ದಾವಾ ಷೆಡ್ಯೂಲ್ ಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲದೇ ಇರುವುದರಿಂದ ನಾನು ಯಾವುದೇ ಗಿಡಗಳನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನನಗೆ ಯಾವುದೇ ಹಕ್ಕಾಗಲಿ, ಸ್ವಾಧೀನವಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**